೫. ದೇವದಾಸಿ ಮಹಿಳೆಯರಿಗೆ ಈ ಕೆಳಕಂಡ ಸ್ಥಳಗಳಲ್ಲಿ ತರಬೇತಿ ಕೇಂದ್ರಗಳನ್ನು ತೆರೆಯಲಾಗಿದೆ. ೧. ಮನೋಳಿ ೨. ಅಥಣಿ ೩. ಕಟಕೋಳ ೪. ಎಡವಾಡ ೫. ಕೌಜಲಗಿ. ಸದರಿ ತರಬೇತಿ ಕೇಂದ್ರಗಳಲ್ಲಿ ಹೊಲಿಗೆ ತರಬೇತಿ ಮುಂಬತ್ತಿ ತಯಾರಿಕೆ, ಅಗರಬತ್ತಿ ತಯಾರಿಕೆ ಮತ್ತು ಡಿಟರ್ಜೆಂಟ್ ಸೋಪು ತಯಾರಿಕೆ ಇತ್ಯಾದಿಗಳನ್ನು ದೇವದಾಸಿಯರ ಆದಾಯೋತ್ಪನ್ನ ಹೆಚ್ಚಿಸಲು ಮೇಲೆ ಹೇಳಿರುವ ತರಬೇತಿಗಳನ್ನು ಕೊಡಲಾಗುತ್ತಿದೆ.

೬. ವಿವಿಧೋದ್ದೇಶ ಸಹಕಾರ ಸಂಘ ಸಂಸ್ಥೆಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ. ೧. ಮನೋಳಿ ೨. ಅಥಣಿ ೩. ಕಟಕೋಳ ೪. ಎಡವಾಡ ೫. ಕೌಜಲಗಿ ಅದು ಅಲ್ಲದೇ ದೇವದಾಸಿ ಮಹಿಳೆಯರು ಸಹಾಯ ಪಡೆಯಲು ವಿವಿಧೋದ್ದೇಶ ಸಹಕಾರ ಸಂಘ ಸಂಸ್ಥೆಗಳನ್ನು ನೋಂದಾಯಿಸಲಾಗಿದೆ. ಸದರಿ ವಿವಿಧೋದ್ದೇಶ ಸಹಕಾರ ಸಂಘ ಸಂಸ್ಥೆಗಳು ವಿದ್ಯಾ ವಿಕಾಸ ಯೋಜನೆಯಡಿಯಲ್ಲಿ ಸಮವಸ್ತ್ರಗಳನ್ನು ಹೊಲಿಯಲು ಆದೇಶವನ್ನು ಪಡೆದುಕೊಂಡಿರುತ್ತವೆ. ಮಹಿಳೆಯರ ಹಾಗೂ ಮಕ್ಕಳ ಕಲ್ಯಾಣ ಇಲಾಖೆ ಬೆಳಗಾವಿ ಜಿಲ್ಲೆಯಲ್ಲಿರತಕ್ಕಂತಹ ಎಲ್ಲಾ ಸಂಧಾರಣಾ ಸಂಸ್ಥೆಗಳಲ್ಲಿರುವ ಅಧೀಕ್ಷಕರುಗಳಿಗೂ ಸಹ ಅವರ ಸಂಸ್ಥೆಗಳ ನಿವಾಸಿಗಳ ಉಪಯೋಗಕ್ಕಾಗಿ ಬೇಕಾಗಿರತಕ್ಕಂತಹ ಉಡುಪುಗಳನ್ನು ಮೇಲೆ ಹೇಳಿರುವ ವಿವಿಧೋದ್ದೇಶ ಸಹಕಾರ ಸಂಘ ಸಂಸ್ಥೆಗಳಿಂದ ಹೊಲಿಸಿ ಕೊಳ್ಳಲು ಸೂಚನೆ ನೀಡಲಾಗಿದೆ. ಇದು ಅಲ್ಲದೇ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಮರಿಯಮ್ಮನ ಹಳ್ಳಿಯಲ್ಲಿ ೪೦ ಜನ ದೇವದಾಸಿ ಮಹಿಳೆಯರಿಗೆ ಸೀರೆ ಟವಲ್ ಮತ್ತು ಪಂಚೆ ಇತ್ಯಾದಿಗಳನ್ನು ನೇಯಲು ೯ ಮಗ್ಗಗಳು ತರಬೇತಿಯನ್ನು ಟ್ರೈಸೆಮ್ ಯೋಜನೆಯಡಿಯಲ್ಲಿ ಕೊಡಿಸಲಾಗುತ್ತಿದೆ.

೭. ದೇವದಾಸಿ ಮಹಿಳೆಯರನ್ನು ಮದುವೆಯಾಗಲು ಯಾರಾದರೂ ಅಪೇಕ್ಷೆ ಪಟ್ಟಲ್ಲಿ ಅಂತಹವರಿಗೆ ೩೦೦೦ ರೂ.ಗಳನ್ನು ಸರ್ಕಾರದಿಂದ ಧನ ಸಹಾಯವನ್ನು ನೀಡಲಾಗುತ್ತಿದೆ. ಇಲ್ಲಿಯವರೆಗೆ ೨೧೪ ಮದುವೆಗಳಿಗೆ ಈ ಯೋಜನೆಯಡಿಯಲ್ಲಿ ಧನ ಸಹಾಯ ನೀಡಲಾಗಿದೆ.

೮. ಈ ಸಾಮಾಜಿಕ ಪಿಡುಗಿಂಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಸಭೆಗಳನ್ನು ಈ ಕೆಳಕಂಡ ಜಿಲ್ಲೆಗಳಲ್ಲಿ ಅಂದರೆ ಶಿವಮೊಗ್ಗ, ಬೆಳಗಾವಿ, ಬಳ್ಳಾರಿ, ಬಿಜಾಪುರ, ಧಾರವಾಡ, ಮಡಕೇರಿ ಮಂತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ಶಿಬಿರಗಳನ್ನು ನಡೆಸಲಾಗಿದೆ. ಇದು ಅಲ್ಲದೇ ಸಮುದಾಯ ಎಂಬ ಸ್ವಯಂ ಸೇವಾ ಸಂಸ್ಥೆಯವರು "ಜೋಗತಿ" ಎಂಬ ದೇವದಾಸಿಯರ ಬಗ್ಗೆ ನಾಟಕವನ್ನು ರಾಯಚೂರು ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಪ್ರದರ್ಶಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

೯. ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ತಾಲ್ಲೂಕು ಮಟ್ಟಗಳಲ್ಲಿ ಭಿತ್ತಿಪತ್ರ ಕರಡು ಪತ್ರಗಳು, ತೆಗಡಿನ ಪಲಕಗಳನ್ನು ಹಂಚುವ ಕಾರ್ಯಕ್ರಮಗಳನ್ನು ಮತ್ತು ರೇಡಿಯೋ ಹಾಗೂ ದೂರದರ್ಶನಗಳ ಮುಖಾಂತರ ಈ ಸಾಮಾಜಿಕ ಪಿಡುಗಿನ ಬಗ್ಗೆ ಪ್ರಸಾರ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ.

೧೦. ಇಲಾಖಾವತಿಯಿಂದ ದೇವದಾಸಿ ಅನಿಷ್ಟ ಪದ್ಧತಿಯ ಬಗ್ಗೆ "ದೇವದಾಸಿ" ಎಂಬ ಒಂದು ಸಾಕ್ಷ್ಯ ಚಿತ್ರವನ್ನು ತಯಾರಿಸಲಾಗಿದೆ

೧೧) ವಿವಿಧ ಕಾರ್ಯಕ್ರಮಗಳಿಗಾಗಿ ಕಳೆದ ೩ ವರ್ಷಗಳಲ್ಲಿ ಒಟ್ಟು ೧೧,೨೨,೧೦೦-೦೦ ರೂ. ಗಳನ್ನು ಖರ್ಚು ಮಾಡಲಾಗಿದೆ.

ತುಮಕೂರು ಜಿಲ್ಲೆ ಗುಬ್ಬಿ ನಗರದ ಬಸ್ ನಿಲ್ದಾಣ

೮೭೦. ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಮಕೂರು ಜಿಲ್ಲೆಯ ಗುಬ್ಬಿ ನಗರದ ಬಸ್ ನಿಲ್ದಾಣಕ್ಕೋಸ್ಕರ ಪುರಸಭೆಯವರು ಜಮೀನನ್ನು ಬಿಟ್ಟುಕೊಟ್ಟು ಎಷ್ಟು ವರ್ಷಗಳಾಗಿವೆ ?

ಆ) ಗುಬ್ಬಿ ನಗರದಲ್ಲಿ ಬಸ್ ನಿಲ್ದಾಣವಿಲ್ಲದೆ ಬೇಸಿಗೆಯಲ್ಲಿ ಒಣಗುತ್ತಾ, ಮಳೆಗಾಲದಲ್ಲಿ ನೆನೆಯುತ್ತಾ, ಚಳಿಗಾಲದಲ್ಲಿ ನಡುಗುತ್ತಾ, ಜನರು ತೊಂದರೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ, ಯಾವಾಗ ವ್ಯವಸ್ಥಿತವಾದ ಬಸ್ ನಿಲ್ದಾಣವನ್ನು ಕಟ್ಟಿಸಲು ಕ್ರಮ ಕೈಗೊಳ್ಳಲಾಗುತ್ತದೆ ?

ಶ್ರೀ ಸಿದ್ಧರಾಮಯ್ಯ (ಸಾರಿಗೆ ಮಂತ್ರಿಗಳು).—

ಅ) ೯ ವರ್ಷಗಳಾಗಿವೆ.

ಆ) ಬಂದಿದೆ.

ಇ) ೧೯೮೯-೯೦ನೇ ಸಾಲಿನಲ್ಲಿ.

ವಿಜಯಪುರ ಪಟ್ಟಣದಲ್ಲಿ ಸೂಕ್ತವಾದ ಬಸ್ ನಿಲ್ದಾಣವಿಲ್ಲದಿರುವುದು.

೯೬೭. **ಶ್ರೀ ಪಿ. ಸಿ. ಮುನಿಸ್ವಾಮಯ್ಯ, (ದೇವನಹಳ್ಳಿ).**—ಮಾನ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿಜಯಪುರ ಪಟ್ಟಣದಲ್ಲಿ ಸೂಕ್ತವಾದ ಬಸ್ ನಿಲ್ದಾಣವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ೧೯೮೯-೯೦ನೇ ಸಾಲಿನಲ್ಲಿ ವಿಜಯಪುರ ಪಟ್ಟಣದಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಸಿದ್ಧರಾಮಯ್ಯ (ಸಾರಿಗೆ ಮಂತ್ರಿಗಳು).—

ಅ) ವಿಜಯಪುರದ ಪುರಸಭೆಯವರ ಬಸ್ ನಿಲ್ದಾಣದಿಂದ ಸದ್ಯಕ್ಕೆ ಅವಶ್ಯಕತೆಯನ್ನು ಪೂರೈಸಲಾಗುತ್ತಿದೆ.

ಆ) ಪ್ರಸ್ತುತ ವಿಜಯಪುರದಲ್ಲಿ ಹೊಸ ಬಸ್ ನಿಲ್ದಾಣದ ಅವಶ್ಯಕತೆ ಕಂಡು ಬರುತ್ತಿಲ್ಲ.

ಕೋ ಎಕ್ಸ್‌ಟ್ರೂಡೆಡ್ ಪ್ಲಾಸ್ಟಿಕ್ ಫಿಲಂ ಅನ್ನು ತಯಾರಿಸುವ ಬಗ್ಗೆ

೯೬೮. **ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).**—ಮಾನ್ಯ ಪಶು ಸಂಗೋಪನೆ ಮತ್ತು ರೇಷ್ಮೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೋ-ಎಕ್ಸ್‌ಟ್ರೂಡೆಟ್ ಪ್ಲಾಸ್ಟಿಕ್ ಫಿಲಂ ಅನ್ನು ತಯಾರಿಸುತ್ತಿರುವ ಕರ್ನಾಟಕದ ಉದ್ಯಮಗಳು ಇತರ ರಾಜ್ಯಗಳಲ್ಲಿ ಅನುಸರಿಸುತ್ತಿರುವ ಪದ್ಧತಿಯಂತೆ ಹಾಲನ್ನು ಪ್ಯಾಕ್ ಮಾಡುವುದ ಕ್ಕಾಗಿ ಕೆ ಎಂ.ಎಫ್ ಸರಬರಾಜು ಮಾಡಬೇಕೆಂದು ಪ್ರಸ್ತಾಪಿಸಲಾಗಿರುವ ಕಚ್ಚಾ ಪದಾರ್ಥವನ್ನು ಸಂಸ್ಕರಿಸಲು ಇಚ್ಚಿಸಿರುವುದು ವಾಸ್ತವ ಸಂಗತಿಯೇ ?

ಆ) ರಾಜ್ಯದ ಹೊರಗಡೆಯ ತಯಾರಕರಿಂದ ಫಿಲಂ ಅನ್ನು ಖರೀದಿಸುವುದರಿಂದಾಗಿ ರಾಜ್ಯವು ತನ್ನ ಆದಾಯವನ್ನು ಕಳೆದುಕೊಳ್ಳುತ್ತದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಕಾರ್ಮಿಕ ವೆಚ್ಚಗಳನ್ನು ಸಂದಾಯ ಮಾಡಿ ಪರಿವರ್ತನಾ ಪದ್ಧತಿಯನ್ನು ಅಳವಡಿಸಿ ಕೊಳ್ಳುವುದರಿಂದ ಕೆ.ಎಂ.ಎಫ್.ಗೆ ಸಾಕಷ್ಟು ಹಣದ ಉಳಿತಾಯವಾಗುತ್ತದೆ. ಮತ್ತು ಕರ್ನಾಟಕದಲ್ಲಿನ ಸ್ಥಳೀಯ ಉದ್ಯಮಗಳಿಗೆ ಸಾಕಷ್ಟು ಕೆಲಸ ದೊರೆಯಂತ್ತದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ, ಸ್ಥಳೀಯ ಕೈಗಾರಿಕೆಗಳು ಗ್ರಾನ್ಯೂಲ್‌ಗಳನ್ನು ಪರಿವರ್ತಿಸುವ ಹಾಗೂ ಕಚ್ಚಾ ಪದಾರ್ಥವನ್ನು ಸರಬರಾಜು ಮಾಡುವ ಪದ್ಧತಿಯನ್ನು ಅಳವಡಿಸಿಕೊಳ್ಳುವಲ್ಲಿ ವಿಳಂಬವಾಗುತ್ತಿರು ವುದಕ್ಕೆ ಕಾರಣಗಳೇನು ?

ಉ) ಈ ಪದ್ಧತಿಯನ್ನು ಅಳವಡಿಸಿಕೊಳ್ಳಲು ಮತ್ತು ಬಾಕಿಯಿರುವ ಟೆಂಡರ್‌ಗಳನ್ನು ಮಾರ್ಚ್ ೧೯೮೯ ರ ಹೊತ್ತಿಗೆ ರದ್ದು ಮಾಡಲು ಸರ್ಕಾರವು ಶೀಘ್ರ ಕ್ರಮಗಳನ್ನು ಕೈಗೊಳ್ಳುವುದೇ ?

ಶ್ರೀ ಕೃಷ್ಣ (ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು).—

ಅ) ಹೌದು.